# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **768/2015**

ಸಿ.ಡಬ್ಲ್ಯೂ- 3
ಪಿ.ಡಬ್ಲ್ಯೂ- 3

**ದಿನಾಂಕಃ 06-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ರಮೇಶ ಉಳ್ಳಾಗಡ್ಡಿ |
| ತಂದೆಯ/ಗಂಡನ ಹೆಸರು | : ಮಲ್ಲಪ್ಪ |
| ವಯಸ್ಸು | : 38 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ ಸ್ಥಳ | : ಹಂದಿಗುಂದ |
| ತಾಲೂಕು | : ರಾಯಭಾಗ |

**<u>ಮುಖ್ಯ ವಿಚಾರಣೆಃ ಎ.ಪಿ.ಪಿ ರವರಿಂದ:-</u>**

ನಾನು ಪಾಂಡಪ್ಪ ರಾಮಪ್ಪ ಕಳಸನ್ನವರ ಅವರ ಮಗಳಾದ ಲಲಿತಾ- ಚಾಸಾ 2 ರವರನ್ನು ಮದುವೆ ಮಾಡಿಕೊಂಡಿರುತ್ತೇನೆ. ಮೂಡಲಗಿ ವ್ಯಾಪ್ತಿಯ ಜಮೀನು ಸರ್ವೇ ನಂ. 376/9 1 ಎಕರೆ 10 ಗುಂಟೆ ಜಮೀನು ಪಾಂಡಪ್ಪ ಅವರ ತಂದೆ ರಾಮಪ್ಪ ಕಳಸನ್ನವರ ಅವರ ಹೆಸರಿನಲ್ಲಿ ಟೆನೆಸ್ಸಿ ಕಾಯ್ದೆ ಅಡಿಯಲ್ಲಿ ಸರ್ಕಾರದಿಂದ ನೀಡಲಾಗಿರುತ್ತದೆ. ಪಾಂಡಪ್ಪನ ತಂದೆ ರಾಮಪ್ಪ ಇವರು ತೀರಿಕೊಂಡಿದ್ದು, ಅವರ ಅಣ್ಣನಾದ ಗಂಗಪ್ಪ 1971 ರಲ್ಲಿ, ಯಲ್ಲಪ್ಪ 2001 ರಲ್ಲಿ, ಸದಾಶಿವ ಈತನು 2013 ರಲ್ಲಿ, ನಾಗಪ್ಪ 2005 ರಲ್ಲಿ ಮರಣಹೊಂದಿರುತ್ತಾರೆ. ನನ್ನ ಮಾವ ಪಾಂಡಪ್ಪ ರಾಮಪ್ಪ ಕಳಸನ್ನವರ ಅವರ ಅಣ್ಣನಾದ ಗಂಗಪ್ಪ ಈತನು ಮರಣ ಹೊಂದಿದ ನಂತರ ಆತನ ಹೆಂಡತಿ ಭೂನ್ಯಾಯ ಮಂಡಳಿ ಗೋಕಾಕನಲ್ಲಿ ಅಧಿಬೋಗದ ಹಕ್ಕನ್ನು ಕೋರಿ ದಿಃ 31-12-1974 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಆ ಪ್ರಕಾರ ಗೋಕಾಕ ಭೂನ್ಯಾಯ ಮಂಡಳಿ ಗೌರವ್ವ ಗಂಗಪ್ಪ ಕಳಸನ್ನವರ ಮತ್ತು ಅವರ ಮೈದುನಂದಿರಾದ ಯಲ್ಲಪ್ಪ, ಸದಾಶಿವ, ನಾಗಪ್ಪ ಮತ್ತು ಪಾಂಡಪ್ಪ ಇವರೆಲ್ಲರ ಹೆಸರಿಗೆ ದಿಃ 01-03-1974 ರಲ್ಲಿ ಸದರಿ ಜಮೀನಿನ ಅಧಿಬೋಗದಾರರು ಇರುತ್ತಾರೆಂದು ಆದೇಶ ಆಗಿರುತ್ತದೆ. ಸದರಿ ಕೇಸ ನಂಬರ 65-54/76-77 ದಿಃ 18-08-1976 ಆಗಿರುತ್ತದೆ.

ದಿಃ 11-08-2010 ರಲ್ಲಿ ಗೌರವ್ವ ಗಂಗಪ್ಪ ಕಳಸನ್ನವರ, ಗೌರವ್ವ ಯಲ್ಲಪ್ಪ ಕಳಸನ್ನವರ, ಮಾನಿಂಗಪ್ಪ ಯಲ್ಲಪ್ಪ ಕಳಸನ್ನವರ, ಶಾಂತವ್ವ ನಾಗಪ್ಪ ಕಳಸನ್ನವರ ಮತ್ತು ಪಾಂಡು ನಾಗಪ್ಪ ಕಳಸನ್ನವರ ಕೂಡಿ ಮೂಡಲಗಿಯ ಯಲ್ಲಪ್ಪ ಕೇದಾರೆಪ್ಪ ಖಾನಪ್ಪಗೋಳ ಇವರಿಗೆ ಜಮೀನು ಸರ್ವೇ ನಂ. 376/9 ಕ್ಷೇತ್ರ 1 ಎ 10 ಗುಂ ಜಮೀನು ಖರೀದಿ ಕೊಟ್ಟಿರುತ್ತಾರೆ. ಸದರಿ ಖರೀದಿ ಪತ್ರಕ್ಕೆ ಸುಭಾಷ ದೇವಂದ್ರಪ್ಪ ಬಡಿಗೇರ ಮತ್ತು ಕಾಡಪ್ಪ ಹನಮಂತ ಬಡಗನ್ನವರ ಸಾಕ್ಷಿಗಳೆಂದು ಸಹಿ ಮಾಡಿರುತ್ತಾರೆ. ಆದರೆ ನನ್ನ ಮಾವ ಪಾಂಡಪ್ಪ ರಾಮಪ್ಪ ಕಳಸನ್ನವರ 1981 ರಲ್ಲಿ ತೀರಿಕೊಂಡ ವಿಷಯ ಗೊತ್ತಿದ್ದರೂ ಸಹ ಚನಬಸಪ್ಪ ಪರಪ್ಪ ಉಳ್ಳಾಗಡ್ಡಿ ಇವರ

ಪ್ರಚೋದನೆಯಿಂದ ನಮ್ಮ ವಿಮಲವ್ವ - ಚಾಸಾ 1 ಇವರ ಜಮೀನನ್ನು ಕಬಳಿಸುವ ಉದ್ದೇಶದಿಂದ ಮೋಸದಿಂದ ವಿಠ್ಠಲ ಚನಬಸಪ್ಪ ಉಳ್ಳಾಗಡ್ಡಿ - 2 ನೇ ಆರೋಪಿ ಈತನು ಮೃತ ನನ್ನ ಮಾವ ಪಾಂಡಪ್ಪ ರಾಮಪ್ಪ ಕಳಸನ್ನವರ ಇವರಂತೆ ನಟಿಸಿ ತಾನೇ ಪಾಂಡಪ್ಪ ಎಂದು ಖರೀದಿ ಪತ್ರದಲ್ಲಿ ಫೋಟೋ ಅಂಟಿಸಿ ನನ್ನ ಮಾನ ಪಾಂಡಪ್ಪನ ಖೊಟ್ಟಿ ಸಹಿ ಮಾಡಿ, ಸರ್ವೇ ನಂ. 376/9 1 ಎ 10 ಗುಂ ಜಮೀನನ್ನು ಮಾರಾಟ ಮಾಡಿ ಖರೀದಿ ಪತ್ರ ಬರೆದುಕೊಟ್ಟಿರುತ್ತಾನೆ. ಸದರಿ ಮೋಸದ ಸಂಗತಿಯು ನಾನು ಮತ್ತು ನನ್ನ ಅತ್ತೆ -ಚಾಸಾ 1 ಕೂಡಿಕೊಂಡು ಸರ್ವೇ ನಂ. 376/9 ರ ಜಮೀನನ್ನು ಅಭಿವೃದ್ದಿಪಡಿಸಲು ಲೋನ್ ತೆಗೆಯುವ ವಿಚಾರವಾಗಿ ಈ ಮೋಸದ ಸಂಗತಿ ನಮಗೆ ತಿಳಿದುಬಂದಿರುತ್ತದೆ. ಪ್ರಕರಣದ ವಿಚಾರವಾಗಿ ಚಾಸಾ 1 ನನ್ನ ಅತ್ತೆ ಇವರು ದಿಃ 25-07-2014 ರಂದು ಗೌರವ್ವ ಯಲ್ಲಪ್ಪ ಕಳಸನ್ನವರ, ಗೌರವ್ವ ಗಂಗಪ್ಪ ಕಳಸನ್ನವರ, ಮಾನಿಂಗ ಯಲ್ಲಪ್ಪ ಕಳಸನ್ನವರ, ಯಲ್ಲಪ್ಪ ಕೇದಾರಪ್ಪ ಖಾನಪ್ಪಗೋಳ, ಸುಭಾಷ ದೇವಂದ್ರಪ್ಪ ಬಡಿಗೇರ, ಕಾಡಪ್ಪ ಹನಮಂತ ಬಡಗನ್ನವರ ವಿರುದ್ದ ದೂರು ದಾಖಲಿಸಿರುತ್ತಾರೆ. ಪ್ರಕರಣದ ವಿಚಾರವಾಗಿ ನಾನು ತನಿಖಾಧಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರ ಶ್ರೀ ಎಸ್ ಎಮ್ ಬಿ ವಕೀಲರಿಂದಃ</u>**

ನನ್ನ ಮಾವನ ಹೆಸರು ಪಾಂಡಪ್ಪ ರಾಮಪ್ಪ ಕಳಸನ್ನವರ ಆಗಿರುತ್ತದೆ. ಸರ್ವೇ ನಂ. 376/9 ಪಾಂಡಪ್ಪ ರಾಮಪ್ಪ ಕಳಸನ್ನವರ ಅವರಿಗೆ ಸಂಬಂಧ ಇರುವುದಿಲ್ಲ ಎಂರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪಾಂಡಪ್ಪನ ತಂದೆ ರಾಮಪ್ಪ ಯಲ್ಲಪ್ಪ ಕಳಸನ್ನವರ ಇವರಿಗೆ ಟೆನೆನ್ಸಿ ಕಾಯ್ದೆ ಅಡಿ ಜಮೀನು ಬಂದಿದ್ದು, ಅವರ ಮಗನಾದ ನನ್ನ ಮಾವ ಪಾಂಡಪ್ಪ ರಾಮಪ್ಪ ಕಳಸನ್ನವರ ಈತನಿಗೆ ಜಮೀನಿನಲ್ಲಿ ಹಕ್ಕು ಇರುತ್ತದೆ. ಸರ್ವೇ ನಂ. 376/9 ಪಾಂಡಪ್ಪ ಗಂಗಪ್ಪ ಕಳಸನ್ನವರ ಅವರಿಗೆ ಸಂಬಂಧಪಟ್ಟಿದ್ದು ಇರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಭೂನ್ಯಾಯ ಮಂಡಳಿ ಗೋಕಾಕನಲ್ಲಿ ಅರ್ಜಿ ನೀಡುವಾಗ ಅರ್ಜಿಯಲ್ಲಿ ತಪ್ಪಾಗಿ ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ತಪ್ಪಾಗಿ ನಮೂದು ಆಗಿರುವ ಬಗ್ಗೆ ಠಾಣೆಯಲ್ಲಿ ಅಥವಾ ನ್ಯಾ ದಲ್ಲಿ ಪ್ರಕರಣ ದಾಖಲಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಚಾಸಾ 1-ನನ್ನ ಅತ್ತೆ ದೂರು ದಾಖಲಿಸಿರುತ್ತಾರೆಂದು ನುಡಿಯುತ್ತಾರೆ. ಈ ರೀತಿ ತಪ್ಪಾಗಿರುವ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ ಆದರೆ ಚಾಸಾ 1 ರವರು ಹೇಳಿರುತ್ತಾರೆ. ಈ ವಿಚಾರವನ್ನು ನಾನಾಗಲೀ ಚಾಸಾ 1 ರವರಾಗಲೀ ನ್ಯಾ ದ ಮುಂದೆ ಅಥವಾ ಪೊಲೀಸರ ಮುಂದೆ ಹೇಳಿರುವುದಿಲ್ಲ, ಹೇಳಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ದ್ವಿತೀಯ ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದು, ಓದು ಬರಹ ಬರುತ್ತದೆ. ನಾನು ಹಂದಿಗುಂದ ನಿವಾಸಿಯಾಗಿರುತ್ತೇನೆ. ಸರ್ವೇ ನಂ. 376/9 ಮೂಡಲಗಿ ವ್ಯಾಪ್ತಿಯಲ್ಲಿರುತ್ತದೆ. ಸದರಿ

ಜಮೀನಿನ ಒಟ್ಟು ಕ್ಷೇತ್ರ 1 ಎ 10 ಗುಂಟೆ ಇರುತ್ತದೆ. ಸದರಿ ಜಮೀನಿನ ಪೂರ್ವಕ್ಕೆ - ಸಂಜು ನಾಸಿ ಇವರ ಜಮೀನು, ಪಶ್ಚಿಮಕ್ಕೆ - ನಿಡಗುಂದಿ ಇವರ ಜಮೀನು, ದಕ್ಷಿಣಕ್ಕೆ - ಸಂಜು ನಾಸಿ ಇವರ ಜಮೀನು ಮತ್ತು ಉತ್ತರಕ್ಕೆ - ಖಾನಪ್ಪಗೋಳ ಇವರ ಜಮೀನು ಇರುತ್ತದೆ. ನಾನು ಮೇಲೆ ಹೇಳಿದ ಚಕಬಂದಿ ಸರ್ವೇ ನಂ. 376/9 ಕ್ಕೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿಲ್ಲಿ ಹಿಂದೆ ಭತ್ತ ಬೆಳೆಯುತ್ತಿದ್ದು ಈಗ ಗೋವಿನ ಜೋಳ ಮತ್ತು ಕಬ್ಬು ಬೆಳೆಯಲಾಗುತ್ತದೆ. ನಾನು 1997 ರಲ್ಲಿ ಮದುವೆ ಮಾಡಿಕೊಂಡಿರುತ್ತೇನೆ. ಮದುವೆ ಆಗುವ ಮುಂಚೆ ನನ್ನ ಮಾವ ಮತ್ತು ಅವರ ಅಣ್ಣತಮ್ಮಂದಿರ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಮದುವೆ ಆಗುವ ಮುಂಚೆ ನನ್ನ ಮಾವ ಮತ್ತು ಅವರ ಅಣ್ಣತಮ್ಮಂದಿರ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಕರಣದಲ್ಲಿ ಖರೀದಿ ಆಗಿದೆ ಎಂದು ಹೇಳಲಾದ ವ್ಯವಹಾರದಲ್ಲಿ ನಾನು ಖರೀದಿ ನೊಂದಣಿ ಆಗುವ ಸಮಯದಲ್ಲಿ ನೊಂದಣಾಧಿಕಾರಿ ಕಚೇರಿಗೆ ಹೋಗಿರುವುದಿಲ್ಲ ಎಂದರೆ ಸರಿ. ಖರೀದಿ ಪತ್ರವನ್ನು ಬೆರಳಚ್ಚುಪಡಿಸಿದವರು, ಮಾಹಿತಿ ನೀಡಿದವರು ಯಾರು, ಅದಕ್ಕೆ ಸಹಿ ಮಾಡಿದವರು ಯಾರು ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ನಿಪಿ- 3 ಪಾಂಡಪ್ಪ ರಾಮಪ್ಪ ಕಳಸನ್ನವರ ಅವರ ಮರಣ ಪ್ರಮಾಣ ಪತ್ರ ಅಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ದೂರನ್ನು ನನ್ನ ಅತ್ತೆ - ಚಾಸಾ 1 ರವರು ನೀಡಿರುತ್ತಾರೆ. ಚಾಸಾ 2 ನನ್ನ ಪತ್ನಿ ಎಂದರೆ ಸರಿ. ಚಾಸಾ 2 ಮತ್ತು ಆರೋಪಿತರ ನಡುವೆ ಮಾನ್ಯ ಗೋಕಾಕನ ಸಿವಿಲ್ ನ್ಯಾಯಾಲಯ ದಲ್ಲಿ ಪಾಲು ವಿಭಾಗದ ವಿಚಾರವಾಗಿ ದಾವೆ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿಯಲ್ಲ, ಈಗಾಗಲೇ ಸದರಿ ದಾವೆ ಅಂತಿಮ ಆದೇಶವಾಗಿರುತ್ತದೆ. ಸದರಿ ಆದೇಶ ಮತ್ತು ಡಿಕ್ರಿಯ ಮೇಲೆ ಮಾನ್ಯ ಜಿಲ್ಲಾ ನ್ಯಾಯಾಲಯ ಮತ್ತು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಬೆಂಚನಲ್ಲಿ ಮೇಲ್ಮನವಿ ಚಾಲ್ತಿಯಲ್ಲಿರುತ್ತವೆ ಎಂದರೆ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಡಿಕ್ರಿಯಾಗಿದ್ದು, ಎಫ್ ಡಿ ಪಿ ಮುಗಿದು ಇ ಪಿ ಹಾಕಿರುತ್ತೇವೆ. ಇ ಪಿ ಎಂದರೆ ಸಿವಿಲ್ ನ್ಯಾಯಾಲಯದಲ್ಲಿ ಇ ಪಿ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನನ್ನು ನನ್ನ ಪತ್ನಿ ಚಾಸಾ 2 ರವರನ್ನು ಹೊರತುಪಡಿಸಿ ಬೇರೆಯವರನ್ನು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಚಾಸಾ 1 ಮತ್ತು 2 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನಮಗೆ ಮೋಸ ಮಾಡಿರುವುದನ್ನು ದಾಖಲಾತಿಗಳ ಆಧಾರದ ಮೇಲೆ ಹೇಳಿರುತ್ತೇನೆ. 2013 ರಲ್ಲಿ ದಾಖಲಾತಿಗಳನ್ನು ಗೋಕಾಕ ತಹಶೀಲ್ದಾರ ಕಚೇರಿಯಲ್ಲಿ ಪರಿಶೀಲಿಸಿದಾಗ ತಿಳಿದು ಬಂದಿದ್ದು ದಿನಾಂಕ ನಿರ್ದಿಷ್ಟವಾಗಿ ತಿಳಿದಿರುವುದಿಲ್ಲ. 1 ನೇ ಆರೋಪಿ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಂಬಂಧದಲ್ಲಿ ನನ್ನ ಅತ್ತೆ ಆಗುವ ಗೌರವ್ವ ಗಂಗಪ್ಪ ಕಳಸನ್ನವರ ಇವರು 1 ನೇ ಆರೋಪಿಯೇ ಇದನ್ನು ಮಾಡಿಸಿರುವುದಾಗಿ ನಮಗೆ ಹೇಳಿರುತ್ತಾಳೆ. ಈ ವಿಚಾರವನ್ನು

ಗೌರವ್ವ ಗಂಗಪ್ಪ ಕಳಸನ್ನವರ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಈ ವಿಚಾರವನ್ನು ಗೌರವ್ವ ಗಂಗಪ್ಪ ಕಳಸನ್ನವರ ಹೇಳಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಚಾಸಾ 1 ಮತ್ತು ಇತರರು 1 ನೇ ಆರೋಪಿಗೆ ಕಿರಿಕಿರಿ ಮಾಡದರೆ ಸಿವಿಲ್ ದಾವೆಯಲ್ಲಿ ನಾವು ಹೇಳಿದಂತೆ ಒಪ್ಪಿಕೊಳ್ಳುತ್ತಾನೆಂದು ಈ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2 ನೇ ಆರೋಪಿ ಖರೀದಿಯ ಸಮಯದಲ್ಲಿ ಪಾಂಡಪ್ಪ ರಾಮಪ್ಪ ಕಳಸನ್ನವರ ಎಂದು ನಟಿಸಿ ಖರೀದಿ ಕಾಗದಪತ್ರ ಮಾಡಿಕೊಟ್ಟಿರುತ್ತಾನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಕರಣದಲ್ಲಿ ಹೇಳಿರುವಂತೆ 3 ರಿಂದ 5 ನೇ ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಭೂನ್ಯಾಯ ಮಂಡಳಿಯ ಆದೇಶ ಆಗುವ ಸಮಯದಲ್ಲಿ ನಾನು ಇರಲಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ದಾಖಲಾತಿಗಳನ್ನು ನೋಡಿ ತಿಳಿದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಭೂನ್ಯಾಯ ಮಂಡಳಿಯಲ್ಲಿ ಆದ ಆದೇಶ ನನ್ನ ಮಾವ ಪಾಂಡಪ್ಪ ಇವರಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ 01-03-1974 ರಂದು ನನ್ನ ಮಾವ ಪಾಂಡಪ್ಪನಿಗೆ ಸದರಿ ಜಮೀನಿನ ಅಧಿಬೋಗದ ಹಕ್ಕನ್ನು ಟೆನೆನ್ಸಿ ಕಾಯ್ದೆ ಅಡಿ ನೀಡಲಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಿಃ 18-08-1976 ರ ಕೇಸ ನಂಬರ 65-54/76-77 ನನ್ನ ಮಾವನಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 4 ನೇ ಆರೋಪಿತರು ಚಾಸಾ 1 ರವರಿಗೆ ಮೋಸ ಮಾಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಆರೋಪಿತರು ಖೊಟ್ಟಿ ಖರೀದಿ ಪತ್ರ ಮಾಡಿಕೊಂಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ- 1 ರಲ್ಲಿರುವ ಪಾಂಡಪ್ಪ ಗಂಗಪ್ಪ ಕಳಸನ್ನವರ ಎಂದು ಹೆಸರು ಬರೆದು ಅದರ ಮುಂದಗಡೆ ಇರುವ ಪೊಟೋ 2 ನೇ ಆರೋಪಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 376/9 ಜಮೀನಿನ ಮೇಲೆ ಲೋನ್ ತೆಗೆದುಕೊಳ್ಳಲು ದಾಖಲಾತಿಗಳನ್ನು ತೆಗೆಸಿದಾಗ ಈ ವಿಚಾರ ತಿಳಿದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಲೋನ್ ತೆಗೆದುಕೊಳ್ಳಲು ದಾಖಲಾತಿಗಳನ್ನು ತೆಗೆಸಿದ ನಿರ್ದಿಷ್ಟ ತಿಳಿದಿರುವುದಿಲ್ಲ ಆದರೆ 2013 ರಲ್ಲಿ ತೆಗೆದುಕೊಳ್ಳಲು ದಾಖಲಾತಿಗಳನ್ನು ತೆಗೆಯಿಸಿ ಪರಿಶೀಲಿಸಿರುತ್ತೇನೆ. 2013 ರಲ್ಲಿ ಈ ವಿಚಾರ ತಿಳಿದು ಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ದಿಃ 25-07-2014 ರಂದು ತನಿಖಾಧಿಕಾರಿ ಮುಂದೆ ಪ್ರಕರಣದ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ. ನಾನು ತನಿಖಾಧಿಕಾರಿಗೆ ಪ್ರಕರಣದ ಬಗ್ಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಖೊಟ್ಟಿ ಖರೀದಿ ಪತ್ರ ಮಾಡಿರುವುದಿಲ್ಲ, ಚಾಸಾ 1 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 6 ಮತ್ತು 8 ನೇ ಆರೋಪಿತರ ಪರ Sri. LBW ವಕೀಲರಿಂದಃ</u>**

ನನ್ನ ಮಾವ 1985 ರಲ್ಲಿ ಮರಣ ಹೊಂದಿದ ನಂತರ ಸರ್ವೇ ನಂ. 376/9 ಜಮೀನಿನ ವಾರಸುದಾರರು ನಾವು ಎಂದು ನನ್ನ ಮದುವೆ ಆದ ನಂತರ ನಾನಾಗಲೀ ಚಾಸಾ 1 ಮತ್ತು 2 ರವರಾಗಲೀ ಅರ್ಜಿ ಸಲ್ಲಿಸಿರುವುದಿಲ್ಲ. ಸದರಿ ಜಮೀನಿನ ವಾರಸುದಾರರು ಎಂದು ಅರ್ಜಿ ಕೊಡಲು ಯಾವುದೇ ತೊಂದರೆ ಇರಲಿಲ್ಲ, ಸಾಕ್ಷಿಯು ಮುಂದುವರೆದು ಸದರಿ ಜಮೀನು ನನ್ನ ಮಾವನ ಹೆಸರಿನಲ್ಲಿ ಇದ್ದಿದ್ದರಿಂದ ಹಾಗೆ ಬಿಟ್ಟಿರುತ್ತೇವೆ. ಸರ್ವೇ ನಂ. 376/9 ಜಮೀನಿನಲ್ಲಿ ನನ್ನ ಮಾವನ ಪಾಲಿಗೆ 10 ಗುಂಟೆ ಜಮೀನು ಬರುತ್ತದೆ. ಸದರಿ ಜಮೀನಿನ 10 ಗುಂಟೆಯಲ್ಲಿ ಖರೀದಿ ಆಗುವ ಮುಂಚೆ ಚಾಸಾ 1 ರವರು ಕಬ್ಜೆಯಲ್ಲಿದು, ಪ್ರಸ್ತುತ ಖರೀದಿದಾರರು ಕಬ್ಜೆಯಲ್ಲಿರುತ್ತಾರೆ. ಸದರಿ ಜಮೀನಿನ 10 ಗುಂಟೆ ಜಮೀನಿನಲ್ಲಿ ಚಾಸಾ 1 ಕಬ್ಜೆಯಲ್ಲಿರುವ ಚಕಬಂದಿಯ ಬಗ್ಗೆ ಸಾಕ್ಷಿಗೆ ಕೇಳಿದಾಗ ಸಾಕ್ಷಿಯು ಸದರಿ ಜಮೀನು ಪಾಲು ವಾಟನಿ ಆಗಿರುವುದಿಲ್ಲ ಎಲ್ಲರೂ ಜಂಟಿಯಾಗಿ ಕಬ್ಜೆಯಲ್ಲಿದ್ದರು ಎಂದು ನುಡಿಯುತ್ತಾರೆ. ನನ್ನ ಮಾವ 1985 ರಲ್ಲಿ ಮರಣ ಹೊಂದಿದ ನಂತರ ಸದರಿ ಆಸ್ತಿಗೆ ನಾವು ವಾರಸುದಾರರು ಎಂದು ಅರ್ಜಿ ಕೊಟ್ಟಿರುವುದಿಲ್ಲ, ಕಾರಣ ಸದರಿ ಆಸ್ತಿ ನನ್ನ ಮಾವನಿಗೆ ಸಂಬಂಧಿದ್ದು ಅಲ್ಲ ಎಂದರೆ ಸರಿಯಲ್ಲ.

**ಆರೋಪಿ ನಂ.1 ರಿಂದ 4 ರವರ ವಕೀಲರು ಮಾಡಿದ ಪಾಟೀ ಸವಾಲನ್ನು 6 ಮತ್ತು 8 ನೇ ಆರೋಪಿ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.**

**ಆರೋಪಿ ನಂ.5 ರವರ ವಕೀಲರು 1 ರಿಂದ 4, 6 ಮತ್ತು 8 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.